ಓ.ಎಸ್. ನಂಃ **179/2010**
ಡಿ.ಡಬ್ಲ್ಯೂಃ **1**

ದಿನಾಂಕ **10-01-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್.ಹೆಚ್.ಎಂ.ಜಿ ವಕೀಲರಿಂದಃ

9. ನನ್ನ ತಂದೆಗೆ ಕನ್ನಡ ಓದಲು ಮತ್ತು ಬರೆಯಲು ಚೆನ್ನಾಗಿ ಬರುತ್ತಿತ್ತು ಎಂದರೆ ಸರಿ. ಆದ್ದರಿಂದ ನಿಮ್ಮ ತಂದೆ 1964 ರಲ್ಲಿ ಗಣಪುರ ಗ್ರಾಮದ ಜಮಾ ಬಂದಿಯನ್ನು ತಮ್ಮ ಸ್ವಂತ ಹಸ್ತಾಕ್ಷರದಲ್ಲಿ ಬರೆದು ಸರಕಾರಕ್ಕೆ ಸಲ್ಲಿಸಿದ್ದರು ಎಂದರೆ ಸಾಕ್ಷಿಯು 1954 ರಲ್ಲಿ ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-63 ರಿಂದ 72 ವರೆಗಿನ ದಾಖಲೆಗಳನ್ನು ತೋರಿಸಿ ಅವುಗಳು ನಿಮ್ಮ ತಂದೆ ತಮ್ಮ ಹಸ್ತಾಕ್ಷರದಲ್ಲಿ ಬರೆದಿರುವ ಜಮಾಬಂದಿ ದಾಖಲೆಗಳು ಆಗಿರುತ್ತವೆ ಎಂದರೆ ಸಾಕ್ಷಿಯು ಸರಿ ಎಂದು ನುಡಿದಿರುತ್ತಾರೆ. ನಮೂನೆ ನಂ.6 ರಿಂದ 14 ವರೆಗಿನ ವಿವರಗಳನ್ನು ನಿಮ್ಮ ತಂದೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಸರಿ, ಆದರೆ ವಾದಿಯು ಸಂಪೂರ್ಣ ಕಡತ ಹಾಜರು ಮಾಡಿಲ್ಲ ಎಂದು ನುಡಿಯುತ್ತಾರೆ. ನಿಪಿ-63 ರಲ್ಲಿ ಸರಕಾರಿ ಅಪ್ಪಣೆ ಇಲ್ಲದೇ ಜಮೀನಿನಲ್ಲಿ ಮನೆಗಳು ಹಾಗೂ ಗುಡಿಸಲು ಮತ್ತು ತಿಪ್ಪೆ-ಗುಂಡಿಗಳನ್ನು ಹಾಗೂ ಹಟ್ಟಿ ನಿರ್ಮಾಣ ಮಾಡಿದ್ದಾರೆ ಎಂದು ನಿಮ್ಮ ತಂದೆಯೇ ತಮ್ಮ ಹಸ್ತಾಕ್ಷರದಲ್ಲಿ ಬರೆದಿದ್ದಾರೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಅದೇ ದಾಖಲೆಯಲ್ಲಿ ಸರ್ವೆ ನಂ.88 ರಲ್ಲಿ ಸರಕಾರಿ ಅಪ್ಪಣೆ ಇಲ್ಲದೇ ಖುಷಕಿ ಕಾಸ್ತಿ ಮಾಡಿದ್ದಾರೆ ಎಂದು ನಮೂದಿಸಲಾಗಿದ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಮೂನೆ ನಂ.7 ರಲ್ಲಿ ಯಾದಗಿರಿಯಿಂದ ಗುರುಮಠಕಲ್ ಗೆ ಹೋಗುವ ರಸ್ತೆ ಹಾದು ಹೋಗಿರುವ ಬಗ್ಗೆ ಸಂಬಂಧಿಸಿದ ಜಮೀನುಗಳ ವಿವರ ನಮೂದಿಸಲಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸದರಿ ದಾಖಲೆಗೂ ಹಾಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

10. ನಿಡಿ-27 ರಿಂದ ನಿಡಿ-48 ರಲ್ಲಿನ ಪಹಣಿ ಪತ್ರಿಕೆಗಳು ದಾವಾ ಸರ್ವೆ ನಂ.3 ರ ಜಮೀನಿಗೆ ಸಂಬಂಧಿದ್ದು ಇರುತ್ತವೆ ಎಂದರೆ ಸರಿ. ಸದರಿ ಎಲ್ಲಾ ದಾಖಲೆಗಳು ಕಂದಾಯ ಅಧಿಕಾರಿಗಳು ಯಾರು ಜಮೀನು ಕಬ್ಜಾದಲ್ಲಿ ಇದ್ದಾರೆ ಎಂಬುದನ್ನು ಪರಿಶೀಲನೆ ಮಾಡದೇ

ಅವಿಜ್ಞಾನಿಕವಾಗಿ ತಯಾರಿಸಿದಂತಹ ದಾಖಲೆಗಳು ಆಗಿರುತ್ತವೆ ಎಂದರೆ ಸರಿಯಲ್ಲ. ವಾದಿಯು ತಮ್ಮ ಸಾಕ್ಷ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಜಮೀನು ತಮ್ಮ ಸ್ವಾಧೀನದಲ್ಲಿ ಇದೆ ಎಂದು ಸಾಕ್ಷ ನುಡಿದಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಅಲ್ಲದೇ ಪಿಡಬ್ಲೂ 2 ರವರೂ ಸಹ ದಾವಾ ಜಮೀನು ವಾದಿಯ ಪಾಲಿಗೆ ಹೋಗಿದ್ದು, ವಾದಿಯ ಸ್ವಾ ಧೀನದಲ್ಲಿ ಇದೆ ಎಂದು ಸಾಕ್ಷ ನುಡಿದಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನನ್ನ ತಂದೆಯೂ ಸಹ ದಾವಾ ಜಮೀನು ವಾದಿಯ ಪಾಲಿಗೆ ಹೋಗಿದೆ ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ದಾವಾ ಜಮೀನು ಪ್ರತಿವಾದಿಯರಾದ ನಮ್ಮ ಸ್ವಾ ಧೀನದಲ್ಲಿ ಇದೆ. ದಾವಾ ಜಮೀನನ್ನು ವಾದಿ ಹಾಗೂ ಅವರ ಮಕ್ಕಳು ಈವರೆಗೆ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.

11. ದಾವಾ ಜಮೀನಿನ ಪೂರ್ವಕ್ಕೆ 5-6 ಜನರ ಜಮೀನುಗಳು ಇದ್ದಾವೆ. ಅಂದರೆ ವೆಂಕಟಪ್ಪ ಬಡಿಗೇರಾ, ವೀರನಗೌಡ ಪೋಲಿಸ್ ಪಾಟೀಲ್, ಸಂಗಣ್ಣ ಸಾಹುಕಾರ್, ಕುರುಬರ ನಿಂಗಣ್ಣ ಹಾಗೂ ಸಿದ್ದರಾಮಪ್ಪ ಪೋಲಿಸ್ ಪಾಟೀಲ್ ಮತ್ತು ಇನಾಮ್ ದೇಶಮುಖ್ ರವರ ಹೊಲಗಳು ಇದ್ದಾವೆ. ಸದರಿ ಇನಾಮ್ ದೇಶಮುಖ್ ಜಮೀನನ್ನು ಭೀಮಪ್ಪ ಹರಿಜನ್, ಲಕ್ಷ್ಮೀ ಹರಿಜನ್ ಹಾಗೂ ಭೀಮವ್ವ ಹರಿಜನ್ ರವರು ಮತ್ತು ಇನ್ನೊಬ್ಬರು ಸಾಗುವಳಿ ಮಾಡುತ್ತಾರೆ. ಸದರಿ ಜಮೀನನ್ನು ಭೀಮಪ್ಪ ಹರಿಜನ್ ರವರ ಮಗ ಚಂದ್ರಪ್ಪ ಸಾಗುವಳಿ ಮಾಡುತ್ತಿದ್ದು, ಆತನಿಗೆ ಈ ದಾವೆಯಲ್ಲಿ ಸಾಕ್ಷ ನುಡಿಯುವಂತೆ ಸಮನ್ಸ್ ಜಾರಿ ಮಾಡಿದಾಗ ನಾವುಗಳು ಆತನಿಗೆ ಸಾಕ್ಷ ನುಡಿಯದಂತೆ ಬೆದರಿಕೆ ಹಾಕಿದ್ದೆವು ಎಂದರೆ ಸರಿಯಲ್ಲ. ಸದರಿ ಸಾಗುವಳಿದಾರರಿಗೆ ನಾವುಗಳು ಸಾಕ್ಷ ನುಡಿಯಲು ಬರದಂತೆ ಬೆದರಿಕೆ ಹಾಕಿದ್ದೆವು ಎಂದರೆ ಸರಿಯಲ್ಲ.

12. ದಾವಾ ಆಸ್ತಿಯ ಉತ್ತರಕ್ಕೆ ನನ್ನ ತಂದೆಯ ಹೆಸರಿನಲ್ಲಿ ಇರುವ ಸರ್ವೆ ನಂ.4 ರಲ್ಲಿನ 08 ಎಕರೆ ಜಮೀನು ಇದೆ. ಸದರಿ 08 ಎಕರೆ 01 ಗುಂಟೆ ಜಮೀನನ್ನು ನನ್ನ ತಾತ ನಾಟೀಕಾರ ರವರಿಂದ ಖರೀದಿಸಿ ನನ್ನ ತಂದೆಯ ಹೆಸರಿನಲ್ಲಿ ಖರೀದಿ ಪತ್ರ ಮಾಡಿಸಿದ್ದರು ಎಂದರೆ ಸರಿಯಲ್ಲ. ಸದರಿ ಜಮೀನನ್ನು ನಾಟೀಕಾರನ ಹೊಲ ಎಂದು ಕರೆಯುತ್ತೇವೆ. ಅದೇ ರೀತಿ ದಾವಾ ಆಸ್ತಿಯನ್ನು ದೇವರಾವ್ ಕುಲಕರ್ಣಿ ರವರಿಂದ ಖರೀದಿಸಿದ ಕಾರಣ ದಾವಾ ಜಮೀನನ್ನು ಕುಲಕರ್ಣಿ ರವರ ಜಮೀನು ಎಂದು ಕರೆಯಲಾಗುತ್ತದೆ ಎಂದರೆ ಸರಿ. ನಿಪಿ-23 ರ ದಾಖಲೆಯಲ್ಲಿ ಸರ್ವೆ ನಂ.4 ರ ಜಮೀನು ತಮ್ಮ ಪಾಲಿಗೆ ಬಂದಿದೆ ಎಂದು ಸ್ವತಃ ನನ್ನ ತಂದೆ ಬರೆದಿದ್ದಾರೆ ಎಂದರೆ ಸರಿಯಲ್ಲ.

13. ನನ್ನ ತಂದೆ ದಿನಾಂಕ 28.08.2008 ರಂದು ನಿಧನರಾಗಿರುತ್ತಾರೆ. ಸರ್ವೆ ನಂ.4 ನಿಮ್ಮ ತಂದೆಯ ಪಾಲಿಗೆ ಹೋಗಿರುವುದರಿಂದ ಸದರಿ ಜಮೀನಿನಲ್ಲಿ ಅವರ ಅಂತ್ಯಸಂಸ್ಕಾರ ಮಾಡಲಾಗಿದೆ ಎಂದರೆ ಸಾಕ್ಷಿಯು ಆ ಜಮೀನು ನನ್ನ ತಂದೆಯ ಪಾಲಿಗೆ ಹೋಗಿದೆ ಎಂಬುದು ಸುಳ್ಳು ಎಂದು ನುಡಿಯುತ್ತಾರೆ. ನನ್ನ ತಾಯಿಯ ಅಂತ್ಯ ಸಂಸ್ಕಾರವನ್ನು ಸಹ ಸದರಿ ಸರ್ವೆ ನ.4 ರ ಜಮೀನಿನಲ್ಲಿಯೇ ಮಾಡಲಾಗಿದೆ ಎಂದರೆ ಸರಿ.

14. ದಾವಾ ಆಸ್ತಿ ತನ್ನ ಪಾಲಿಗೆ ಬಂದಿದ್ದು, ಕಂದಾಯ ದಾಖಲೆಗಳಲ್ಲಿ ತಮ್ಮ ಅಣ್ಣ ಅಣ್ಣಪ್ಪ ರವರ ಹೆಸರು ಇರುವುದನ್ನು ತೆಗೆದು ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಡುವಂತೆ ಈ ದಾವೆ ದಾಖಲು ಮಾಡಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ದಾವೆ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ಕೇವಲ ಕಂದಾಯ ದಾಖಲೆ ನನ್ನ ತಂದೆಯ ಹೆಸರಿನಲ್ಲಿ ಇರುವುದರ ದುರುಪಯೋಗ ಪಡಿಸಿಕೊಂಡು ದಾವಾ ಜಮೀನು ಕಬಳಿಸುವ ಉದ್ದೇಶದಿಂದ ನಾವುಗಳು ಸುಳ್ಳು ಹಕ್ಕು ಪ್ರತಿಪಾದನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

15. ಸರ್ವೆ ನಂ.205 ರ ಜಮೀನಿಗೆ ಐನೋರ ಹೊಲ ಎಂದು ಕರೆಯಲಾಗುತ್ತದೆ. ನನ್ನ ಅಜ್ಜ ಸದರಿ ಜಮೀನನ್ನು ಐನೋರ ಕಡೆಯಿಂದ ಖರೀದಿಸಿ ವಾದಿಯ ಹೆಸರನಲ್ಲಿ ಖರೀದಿ ಪತ್ರ ಮಾಡಿಸಿದ್ದರು ಎಂದರೆ ಸರಿ. ಆದ್ದರಿಂದ ಸದರಿ ಜಮೀನನ್ನು ಐನೋರ ಹೊಲ ಎಂದು ಕರೆಯುತ್ತೇವೆ ಎಂದರೆ ಸರಿ. ಸದರಿ ಸರ್ವೆ ನಂ.205 ರ ಜಮೀನು ಸಹ ತಮ್ಮ ಪಾಲಿಗೆ ಬಂದಿದೆ ಎಂದು ಸ್ವತಃ ನನ್ನ ತಂದೆ ನಿಪಿ-23 ರ ದಾಖಲೆಯಲ್ಲಿ ಬರೆದಿದ್ದಾರೆ ಎಂದರೆ ಸರಿಯಲ್ಲ.

16. ನನ್ನ ತಂದೆಯ ಮೊದಲ ಹೆಂಡತಿಯ ಹೆಸರು ಚಂದ್ರಮ್ಮ ಎಂದು ಇತ್ತು. ಸದರಿ ಚಂದ್ರಮ್ಮ ಮರಣಹೊಂದಿದ ನಂತರ ನನ್ನ ತಂದೆ ನನ್ನ ತಾಯಿಯನ್ನು ಮದುವೆ ಆಗಿದ್ದರು. ಅದು ಉಡುಕಿ ಆಗಿರುತ್ತದೆ, ಮದುವೆ ಅಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರು ಸಹ ಚಂದ್ರಮ್ಮ ಎಂದು ಇರುತ್ತದೆ ಎಂದರೆ ಸರಿ. ನನ್ನ ತಂದೆಯ ಮೊದಲ ಹೆಂಡತಿಯ ಚಂದ್ರಮ್ಮ ರವರಿಗೆ ಚಂದ್ರಪ್ಪ ಹಾಗೂ ಲಕ್ಷ್ಮೀಬಾಯಿ ಎಂಬ ಇಬ್ಬರು ಮಕ್ಕಳು ಇದ್ದರು, ಆ ಇಬ್ಬರು ಸಹ ಮರಣಹೊಂದಿರುತ್ತಾರೆ. ಚಂದ್ರಪ್ಪನ ಹೆಂಡತಿ ಮಾಣಿಕ್ಯಮ್ಮ ಸಹ ಮರಣಹೊಂದಿದ್ದಾರೆ. ಚಂದ್ರಪ್ಪ ರವರ ಯಾವ ವರ್ಷ

ಮರಣಹೊಂದಿದ್ದಾರೆ ಎಂಬುದು ನನಗೆ ನೆನಪಿಲ್ಲ. ಚಂದ್ರಪ್ಪ ಮತ್ತು ಆತನ ಹೆಂಡತಿಯ ಅಂತ್ಯಸಂಸ್ಕಾರವನ್ನು ಸರ್ವೆ ನಂ.205 ರ ಜಮೀನಿನಲ್ಲಿ ಮಾಡಲಾಗಿದೆ ಎಂದರೆ ಸರಿಯಲ್ಲ. ಈಗಲೂ ಸಹ ಅವರ ಗೋರಿಗಳು ಸದರಿ ಜಮೀನಿನಲ್ಲಿ ಇದ್ದಾವೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನು ನನ್ನ ತಂದೆಯ ಪಾಲಿಗೆ ಬಂದಿರುವುದರಿಂದ ನನ್ನ ಅಣ್ಣ ಮತ್ತು ಅತ್ತಿಗೆಯ ಅಂತ್ಯಸಂಸ್ಕಾರವನ್ನು ಆ ಜಮೀನಿನಲ್ಲಿ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆಯ ಪಾಲಿಗೆ ಬಂದಿದ್ದರಿಂದ ಈಗಲೂ ಸಹ ಆ ಜಮೀನನ್ನು ನನ್ನ ಅಣ್ಣ-ತಮ್ಮಂದಿರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಎಲ್ಲಾರು ಸೇರಿ ಸಾಗುವಳಿ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನನ್ನ ಅಣ್ಣ ಚಂದ್ರಪ್ಪ ರವರ ಮಗನ ಹೆಸರು ಬನ್ನಪ್ಪ ಎಂದು ಇರುತ್ತದೆ. ಸದರಿ ಬನ್ನಪ್ಪ ಹಾಗೂ ನನ್ನ ಅಣ್ಣ ಭೀಮಶಪ್ಪ ಸರ್ವೆ ನಂ.205 ರ ಜಮೀನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ನಾವುಗಳು ಈವರೆಗೆ ಸಾಗುವಳಿ ಮಾಡುತ್ತಿದ್ದರೂ ಸಹ ಕಂದಾಯ ದಾಖಲೆಗಳಲ್ಲಿ ವಾದಿಯ ಹೆಸರು ನಮೂದು ಇದೆ ಎಂದರೆ ಸಾಕ್ಷಿಯು ವಿಭಾಗ ಆಗಿಲ್ಲ ಆದ್ದರಿಂದ ವಾದಿಯ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ವಿಭಾಗದಲ್ಲಿ ನನ್ನ ತಂದೆಯ ಪಾಲಿಗೆ ಬಂದ ನಂತರ ಈವರೆಗೆ ನಾವುಗಳು ಸಾಗುವಳಿ ಮಾಡುತ್ತಿದ್ದರೂ ಸಹ ಕಂದಾಯ ಇಲಾಖೆಯವರು ಸರಿಯಾಗಿ ಪರಿಶೀಲನೆ ಮಾಡದೇ ಈವರೆಗೆ ವಾದಿಯ ಹೆಸರು ನಮೂದಿಸಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.205 ರ ಜಮೀನು ನಿಮ್ಮ ತಂದೆಯ ಪಾಲಿಗೆ ಬಂದಿದ್ದರೂ ಸಹ ವಾದಿಯ ಹಸೆರಿನಲ್ಲಿ ಇದೆ ಹಾಗೂ ಅದೇ ರೀತಿ ದಾವಾ ಆಸ್ತಿ ವಾದಿಯ ಪಾಲಿಗೆ ಬಂದಿದ್ದರೂ ಸಹ ನಿಮ್ಮ ತಂದೆಯ ಹಸೆರನಲ್ಲಿ ಇದೆ ಎಂದರೆ ಸಾಕ್ಷಿಯು ದಾವಾ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ವಿಭಾಗ ಆಗಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

17. ನನ್ನ ತಾತನಿಗೆ ಮೋಡಿ ಭಾಷೆ ಓದಲು ಮತ್ತು ಬರೆಯಲು ಬರುತ್ತಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ನಿಪಿ-52 ರಿಂದ 55 ರ ದಾಖಲೆಗಳಲ್ಲಿ ನನ್ನ ತಾತ ಘೋಷಣೆ ಮಾಡಿಕೊಂಡು ಮೋಡಿ ಭಾಷೆಯಲ್ಲಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-57 ರ ನೋಟಿಸ್ ಹಾಗೂ ನಿಪಿ-59 ರ ಹೇಳಿಕೆಯಲ್ಲಿ ನಿಮ್ಮ ತಂದೆಯ ಸಹಿ ಇದೆ ಎಂದರೆ ಸಾಕ್ಷಿಯು ಸುಳ್ಳು ಅವುಗಳನ್ನು ಎಸ್ ಹನುಮಂತಪ್ಪ ಆದಂತಹ ನೀವೆ ಸೃಷ್ಟಿ ಮಾಡಿಕೊಂಡಿರುತ್ತೀರಾ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯ ಮಂಡಳಿಯವರು ಬರೆದಿದ್ದಾರೆ ಸರಿಯಲ್ಲ. ಜಮಾ ಬಂದಿಯಲ್ಲಿ ಹಾಗೂ ಸದರಿ ನಿಪಿ-57

ಮತ್ತು 59 ರಲ್ಲಿ ಇರುವ ಸಹಿಗಳು ಒಂದೇ ಆಗಿರುತ್ತವೆ ಎಂದರೆ ಸರಿಯಲ್ಲ. ನಿಪಿ-50 ರ 3 ನೇ ಪುಟದಲ್ಲಿನ ಮಾದರಿ ಸಹಿಗಳು, ಜಮಾಬಂದಿಯಲ್ಲಿ ಇರುವ ಸಹಿಗಳು ಮತ್ತು ನಿಪಿ-57 ಮತ್ತು 59 ರಲ್ಲಿನ ಸಹಿಗಳು ಎಲ್ಲಾವೂ ಸಹ ನಿಮ್ಮ ತಂದೆಯ ಸಹಿಗಳು ಆಗಿರುತ್ತವೆ ಎಂದರೆ ಸಾಕ್ಷಿಯು ನಿಪಿ-57 ಮತ್ತು 59 ರಲ್ಲಿ ಇರುವುದು ನನ್ನ ತಂದೆಯ ಸಹಿ ಅಲ್ಲ ಎಂದು ನುಡಿಯುತ್ತಾರೆ. ಜಮಾಬಂದಿ ಹಾಗೂ ನಿಪಿ-23 ರ ದಾಖಲೆಯಲ್ಲಿನ ಹಸ್ತಾಕ್ಷರಗಳು ಒಂದೇ ಆಗಿದ್ದು, ಅವುಗಳು ನನ್ನ ತಂದೆಯ ಹಸ್ತಾಕ್ಷರ ಆಗಿರುತ್ತವೆ ಎಂದರೆ ಸರಿಯಲ್ಲ. ನಿಪಿ-23 ರಲ್ಲಿನ ವಿವರಗಳನ್ನು ನನ್ನ ತಂದೆ ಬರೆದಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

18. ಈ ದಾವೆಯ ಸಂಪೂರ್ಣ ಅಂಶಗಳನ್ನು ಬದಲಾಯಿಸುವ ಉದ್ದೇಶದಿಂದ ಹಾಗೂ ನನ್ನ ಚಿಕ್ಕಪ್ಪಂದಿರು ಸ್ವತಃ ಸಂಪೂದಿಸಿರುವ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದು ದುರುದ್ದೇಶದಿಂದ ಮಧ್ಯಂತರ ಅರ್ಜಿ ನಂ.20 ನ್ನು ಸಲ್ಲಿಸಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕುಟುಂಬದ ಎಲ್ಲಾ ಆಸ್ತಿಗಳಿಗೆ ಸೇರಿಸಿದಂತೆ ನಾವು ಈಗಾಗಲೇ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಒಎಸ್ ನಂ.107/2024 ರಲ್ಲಿ ಪಾಲು ವಿಭಾಗಕ್ಕಾಗಿ ದಾವೆ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಆ ದಾವೆಯಲ್ಲಿ ನೀವು ವಾದಿಯಾಗಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಪ್ರತಿವಾದಿ ಆಗಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆ ದಾರಿ ತಪ್ಪಿ ಸುವ ಉದ್ದೇಶದಿಂದ ನನ್ನ ಅಣ್ಣನ ಮೂಲಕ ಸದರಿ ದಾವೆ ದಾಖಲಿಸಿಕೊಂಡಿದ್ದೇನೆಂದರೆ ಸರಿಯಲ್ಲ. ಅರ್ಜಿ ನಂ.20 ರಲ್ಲಿನ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದು ಪ್ರತಿವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

19. ಕೊಂಕಲ್ ಗ್ರಾಮದ ಸರ್ವೆ ನಂ.476/ಅ ಹಾಗೂ 476/ಆ ಜಮೀನುಗಳನ್ನು ಯಾವಾಗ ಖರೀದಿಸಿದ್ದಾರೆ ಎಂಬುದು ನನಗೆ ಮಾಹಿತಿ ಇಲ್ಲ. ಸರ್ವೆ ನಂ.476/ಅ ಜಮೀನನ್ನು ನನ್ನ ತಾತ ದಿಃ 03.03.1979 ರಂದು ನನ್ನ ತಂದೆಯ ಹೆಸರಿನಲ್ಲಿ ಖರೀದಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ತಂದೆ ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರದ ದಾಖಲಾತಿ ನಂ.1299/1979 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.476/ಆ ಜಮೀನನ್ನು ನಿಮ್ಮ ಅಜ್ಜ ವಾದಿಯ ಹೆಸರಿನಲ್ಲಿ ಖರೀದಿಸಿದ್ದರು ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರವನ್ನು ಸಹ ದಿನಾಂಕ 03.03.1979 ರಂದು ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಅಷ್ಟೊಂದು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಹೆಸರಿನಲ್ಲಿ ಇರುವ ಜಮೀನುಗಳನ್ನು ಮುಚ್ಚಿ ಟ್ಟು ನನ್ನ ಚಿಕ್ಕಪ್ಪಂದಿರು ವಿಭಾಗದ ನಂತರ ಖರೀದಿಸಿರುವ

ಆಸ್ತಿಗಳನ್ನು ಕಡತದ ಮೇಲೆ ತರುವ ಪ್ರಯತ್ನ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲದೇ ನನ್ನ ತಂದೆ ನಮ್ಮಗಳ ಹೆಸರಿನಲ್ಲಿ ಖರೀದಿಸಿರುವ ಆಸ್ತಿ ವಿವರ ಸಹ ಮುಚ್ಚಿಟ್ಟಿದ್ದಿರಿ ಎಂದರೆ ಸಾಕ್ಷಿಯು ಅದಕ್ಕೂ ಈ ದಾವೆಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

20. ನಿಮ್ಮ ಚಿಕ್ಕಪ್ಪ ಎಸ್ ಹನುಮಂತಪ್ಪ ರವರು ಸರಕಾರಿ ಅಭಿಯೋಜಕರಾಗಿದ್ದ ಸಮಯದಲ್ಲಿ 1983 ರಲ್ಲಿ ಗಣಪೂರ ಗ್ರಾಮದ ಸರ್ವೆ ನಂ.215 ರ ಜಮೀನು ಹಾಗೂ ಯಾದಗಿರಿಯ ನಿವೇಶನ ನಂ.7 ಮತ್ತು 8 ನ್ನು ತಮ್ಮ ಸಂಪಾದನೆಯಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ಅವುಗಳು ಸಹ ನಮ್ಮ ಜಂಟಿ ಕುಟುಂಬದ ಆಸ್ತಿಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ಅವುಗಳು ಜಂಟಿ ಕುಟುಂಬದ ಆಸ್ತಿಗಳು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

21. ದೇವರಾವ್ ಕುಲಕರ್ಣಿ ರವರಿಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ ಎಂದರೆ ನನಗೆ ಗೂತ್ತಿಲ್ಲ. ಅವರುಗಳ ಹೆಸರು ರಾಮಕೃಷ್ಣ ಹಾಗೂ ಭೀಮಸೇನ್ ಎಂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-53 ರ ದಾಖಲಾತಿ ಪ್ರಕಾರ ದೇವರಾವ್ ರವರ ನಂತರ ಅವರ ಮಗ ರಾಮಕೃಷ್ಣ ರಾವ್ ಪಟವಾರಿ ಆಗಿದ್ದರು ಎಂದು ಕಂಡುಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ದೇವರಾವ್ ರವರ ನಂತರ ನನ್ನ ತಂದೆ ಪಟವಾರಿ ಆಗಿದ್ದರು ಎಂದು ನುಡಿಯುತ್ತಾರೆ. ಆದರೆ ನಿಡಿ-23 ರಲ್ಲಿ ರಾಮಕೃಷ್ಣ ರಾವ್ ರವರ ಹೆಸರು ನಮೂದು ಇದೆ ಎಂದರೆ ಸಾಕ್ಷಿಯು ಅದರ ಮುಂದೆ ನನ್ನ ತಂದೆ ಹೊನ್ನಪ್ಪ ತಂದೆ ಮಲ್ಲಪ್ಪ ರವರ ಹೆಸರು ನಮೂದು ಇದೆ ಎಂದು ನುಡಿಯುುತ್ತಾರೆ. ಅಂದರೆ ರಾಮಕೃಷ್ಣರಾವ್ ರವರ ನಂತರ ನಿಮ್ಮ ತಂದೆ ಪಟವಾರಿಯಾಗಿದ್ದರು ಎಂದರೆ ಸಾಕ್ಷಿಯು ರಾಮಕೃಷ್ಣರಾವ್ ರವರಿಗೆ ಕಾರ್ಯ ನಿರ್ವಹಿಸಲು ಆಗದ ಕಾರಣ ನನ್ನ ತಂದೆಯೇ ಪಟವಾರಿ/ವತನದಾರರು ಆಗಿದ್ದರು ಎಂದು ನುಡಿಯುತ್ತಾರೆ. ನಿಡಿ-53 ರ ದಾಖಲೆಯಲ್ಲಿ ನನ್ನ ತಂದೆ ಯಾವ ವರ್ಷದಿಂದ ಪಟವಾರಿಯಾಗಿದ್ದರು ಎಂಬುದು ನಮೂದು ಇಲ್ಲ ಎಂದರೆ ಸರಿ. ರಾಮಕೃಷ್ಣರಾವ್ ರವರು ಯಾವತ್ತು ಸಹ ಪಟವಾರಿಯಾಗಿ ಕೆಲಸ ಮಾಡಿಲ್ಲ. ರಾಮಕೃಷ್ಣರಾವ್ ರವರಿಗೆ ಕಾರ್ಯ ನಿರ್ವಹಿಸಲು ಆಗದ ಕಾರಣ ನಿಮ್ಮ ತಂದೆ ಪಟವಾರಿಯಾಗಿದ್ದರು ಎಂಬುದನ್ನು ತೋರಿಸಲು ದಾಖಲೆ ಇದೆಯೇ ಎಂದರೇ ಸಾಕ್ಷಿಯು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

22. ಹಳ್ಳಿಗಳಲ್ಲಿ ಪಟವಾರಿಗಳ ಕೆಲಸ ಬಹಳ ಜವಬ್ದಾರಿಯುತ ಆಗಿರುತ್ತದೆ ಎಂದರೆ ಸರಿ. ಆದ್ದರಿಂದ ಪಟವಾರಿಯಾಗಿ ನೇಮಕ ಮಾಡಿಕೊಳ್ಳುವ ಮೊದಲು ಪಟವಾರಿಯಾಗುವ ವ್ಯಕ್ತಿಯ

ಕಡೆಯಿಂದ ತನ್ನ ಅವದಿಯಲ್ಲಿನ ಯಾವುದೇ ತಪ್ಪುಗಳಿಗೆ ತಾನೇ ಜವಬ್ದಾರ ಎಂದು ಬರೆಸಿಕೊಳ್ಳಲಾಗುತ್ತದೆ ಎಂದರೆ ಸರಿಯಲ್ಲ.

(ನ್ಯಾಯಾಲಯದ ಕಲಾಪದ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಮದ್ಯಾಹ್ಹ 03.00 ಗಂಟೆಗೆ ಮುಂದೂಡಲಾಗಿದೆ.)

(ಈ ಹಂತದಲ್ಲಿ ವಾದಿ ಪರ ವಕೀಲರ ಪಾಟೀ ಸವಾಲಿಗೆ ಮುಂದೂಡುವಂತೆ ಸಮಯ ಕೋರಿದ್ದರಿಂದ ಸಮಯ  ನೀಡಿ ಮುಂದೂಡಲಾಗಿದೆ)

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ